**(ಇಂದು ದಿನಾಂಕ 25-11-2025 ರಂದು ಸಾಕ್ಷಿಯನ್ನು ಕರೆಸಿ ಪ್ರಮಾಣ ವಚನ ಮಾಡಿಸಲಾಯಿತು)**

**ಪಾಟೀ ಸವಾಲುಃ ಪ್ರತಿವಾದಿ ಪರ ವಕೀಲರಿಂದ**

ನನ್ನ ಖುದ್ದು ಊರು ಕೋಟುರ. ನಾನು ಒಳಟಣಿಯಲ್ಲಿ ವಾಸವಾಗಿರುತ್ತೇನೆ. ದಾವೆಯನ್ನು ಪಾಲು ವಿಬಾಗ ಕೇಳಿ ಸಲ್ಲಿಸಿರುತ್ತಾರೆ. ದಾದಾಪಿರನ 2 ನೇ ಹೆಂಡತಿ ದಾವೆ ಸಲ್ಲಿಸಿರುತ್ತಾಳೆ. ದಾದಾಪೀರ ಕೋಟುರು ಗ್ರಾಮದವನು. ನನಗೆ ಆತ 40 ವರ್ಷದಿಂದ ಪರಿಚಯ. ದಾದಾಪೀರ ನ ಮನೆ ಕೋಟುರಿನ 1 ನೇ ಬಸ್ಸ ಸ್ಟಾಪ ಬಳಿ ಇರುತ್ತದೆ. ದಾದಾಪೀರ 25 ವರ್ಷ ಹಮಾಲಿ ಕೆಲಸ ಮಾಡುತ್ತಿದ್ದ. ನಾನು ದಾದಾಪೀರನ ವಾಹನಗಳಿಗೆ ಇಂದನ ತುಂಬಿಸುತ್ತಿದ್ದನು. ಸದರಿ ವಾಹನಗಳ ಸಂಖ್ಯೆ ಹೇಳಲು ಆಗುವುದಿಲ್ಲ. ದಾದಾಪೀರನಿಗೆ 2 ಹೆಂಡತಿಯರು. 1 ನೇ ವಾದಿ ಮತ್ತು 1 ನೇ ಪ್ರತಿವಾದಿ ದಾದಾಪೀರನ ಹೆಂಡತಿಯರು. 1 ನೇ ವಾದಿಯ ಮದುವೆ ಯಾವಾಗ ಆಗಿರುತ್ತದೆ ಎಂದು ನನಗೆ ಗೊತ್ತಿರುವುದಿಲ್ಲ. 1 ನೇ ಪ್ರತಿವಾದಿಯ ಮದುವೆ ಯವಾಗ ಆಗಿರುತ್ತದೆ ಎಂದು ನನಗೆ ಗೊತ್ತಿರುವುದಿಲ್ಲ. 1 ನೇ ಪ್ರತಿವಾದಿಗೆ 2 ಮಕ್ಕಳು. ಅವರ ಹೆಸರು ಗೊತ್ತಿರುವುದಿಲ್ಲ. 1 ನೇ ಪ್ರತಿವಾದಿ ಮದುವೆ ಮೊದಲು ದಾದಾಪೀರ ಹಮಾಲಿ ಕೆಲಸ ಮಾಡುತ್ತಿದ್ದನು. ಸಹಿರಾಬಾನು ರಾಘವೇಂದ್ರ ಶಾಲೆಯಲ್ಲಿ ಕೆಲಸ ಮಾಡುತ್ತಿದ್ದಳು ಎಂದರೆ ಸರಿ. ಆಕೆಗೆ ಸಾಕಷ್ಟು ವೇತನ ಇತ್ತು ಎಂದರೆ ಸರಿಯಲ್ಲ. ದಾದಾಪೀರ 30 ವರ್ಷಗಳಿಂದ ವಾಹನಗಳನ್ನು ಖರೀದಿಸಿ ಅವುಗಳ ಉದ್ಯೋಗ ಪ್ರಾರಂಭಿಸಿದ್ದನು. ಆತನ ಬಳಿ 2 ಜೆ ಸಿ ಬಿ, 1 ಟ್ರ್ಯಾಕ್ಟರ, 1 ಬೋಲೆರೊ ಇದ್ದವು. ಬೋಲೆರೊ ನ್ನು ದಾದಾಪೀರ ಚಲಾಯಿಸುತ್ತಿದ್ದನು. ದಾದಾಪೀರ ವಾಹನ ಖರೀದಿಸಲು ಶ್ರೀರಾಮ ಫೈನಾನ್ಸ ಮಾಡಿದ್ದನು ಎಂದರೆ ಸರಿಯಲ್ಲ. ದಾದಾಪೀರ ವಾಹನ ಸಾಲ ಹೆಚ್ಚು ಇತ್ತು ಎಂದರೆ ಸರಿಯಲ್ಲ. ಆದ್ದರಿಂದ ಶ್ರೀರಾಮ ಫೈನಾನ್ಸ ಆತನಿಗೆ ನೋಟಿಸ್ ಬಂದಿತ್ತು ಎಂದರೆ ಸರಿಯಲ್ಲ. ಸಾಲ ಮರುಪಾವತಿ ಮಾಡಲು 1 ನೇ ಪ್ರತಿವಾದಿ ಸಹಾಯ ಮಾಡಿರುತ್ತಾಳೆ ಎಂದರೆ ಸರಿಯಲ್ಲ. ಆ ವಿಷಯ ನನಗೆ ಗೊತ್ತಿದ್ದರು ಕೂಡಾ ಇಲ್ಲ ಎಂದು

ಸುಳ್ಳು ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ. ದಾದಪೀರನ ಸಂಬಂದಿಕರು ಕೋಟುರನಲ್ಲಿ ಇರುತ್ತಾರೆ ಎಂದರೆ ಸರಿ. ಸರ್ವೇ ನಂ.453 ನ್ನು ದಾದಾಪೀರ ಖರೀದಿ ಮಾಡಿರುತ್ತಾನೆ ಆದರೆ ಯಾವ ವರ್ಷ ಎಂದು ಗೊತ್ತಿರುವುದಿಲ್ಲ. ವಿಪಿಸಿ ನಂ.418 ಮೂಲತಹ ಸರ್ಕಾರಿ ಆಸ್ತಿ. ಸದರಿ ಆಸ್ತಿ ಈಗ 1 ನೇ ಪ್ರತಿವಾದಿ ಹೆಸರಿನಲ್ಲಿ ಇರುತ್ತದೆ. ಪ್ಲಾಟ ನಂ.4/6 ಮೂಲತಹ ದೇಸಾಯಿ ಮನೆತನಕ್ಕೆ ಸೇರಿದ್ದು. ಸದರಿ ಆಸ್ತಿ 1 ನೇ ಪ್ರತಿವಾದಿ ಹೆಸರಿನಲ್ಲಿ ಇರತ್ತದೆ. 1 ನೇ ಪ್ರತಿವಾದಿ ಏನು ಶಿಕ್ಷಣ ಕಲಿತಿರುತ್ತಾರೆ ಎಂದು ಗೊತ್ತಿರುವುದಿಲ್ಲ. 1 ನೇ ಪ್ರತಿವಾದಿ ಮಿಶ್ರಿಕೋಟಿಯಲ್ಲಿ ಶಾಲೆ ನಡೆಸುತ್ತಿದ್ದರು ಎಂದರೆ ಸರಿ. 1 ನೇ ಪ್ರತಿವಾದಿ ಹೈಕೊರ್ಟ ನಲ್ಲಿ ಕಂಪ್ಯೂಟರ ಕೆಲಸಕ್ಕೆ ಸೇರಿಕೊಂಡಿರುತ್ತಾಳೆ. ದಾದಾಪೀರ ಬೈಕ ಅಪಘಾತದ ಪೆಟ್ಟಿನಿಂದ ತೀರಿಕೊಂಡು 3 ವರ್ಷ ಆಗಿರುತ್ತದೆ.  ದಾವಾ ಆಸ್ತಿ ಅನುಸೂಚಿ ಬಿ(ಬಿ)ಆಸ್ತಿಯನ್ನು 1 ನೇ ಪ್ರತಿವಾದಿ ರೂ.3 ಲಕ್ಷ ಹಣ ನೀಡಿ ಖರೀದಿಸಿರುತ್ತಾರೆ ಎಂದರೆ ಸರಿಯಲ್ಲ. ಸದರಿ ಆಸ್ತಿ ಖರೀದಿ ಕಾಲಕ್ಕೆ ನಾನು ಹೋಗಿರಲಿಲ್ಲ. ದಾದಾಪೀರ  ಟ್ರ್ಯಾಕ್ಟರ ಮತ್ತು ಜೆ ಸಿ ಬಿ ಮಾರಿರುತ್ತಾರೆ. ಯಾವ ವರ್ಷ ಮಾರಾಟ ಮಾಡಿರುತ್ತಾನೆ ಎಂದು ನೆನಪಿರುವುದಿಲ್ಲ. ದಾವಾ ಆಸ್ತಿ ಅನುಸೂಚಿ ಬಿ(ಎ) ನ್ನು 1 ನೇ ಪ್ರತಿವಾದಿ 2013 ರಲ್ಲಿರೂ.1,50,000/- ನೀಡಿ ಖರೀದಿಸಿರುತ್ತಾಳೆ ಎಂದರೆ ಸರಿಯಲ್ಲ. ಅದರ ಮೂಲ ಮಾಲಕರು 1 ನೇ ಪ್ರತಿವಾದಿ ಹೆಸರಿನಲ್ಲಿ ನಿರಂತರ ಭೂಬಾಡಿಗೆ ಪತ್ರ ಬರೆದುಕೊಟ್ಟಿರುತ್ತಾರೆ ಎಂದರೆ ಸರಿಯಲ್ಲ. ದಾದಾಪೀರ ನ ಮನೆ ಆತನ ಜಮೀನಿನಲ್ಲಿ ಇರುತ್ತದೆ. ನನಗೆ 1 ನೇ ವಾದಿ ಮತ್ತು 1 ನೇ ಪ್ರತಿವಾದಿ ಜೊತೆ ಒಳ್ಳೆಯ ಸಂಬಂದ ಇರುತ್ತದೆ ಎಂದರೆ ಸರಿ. 1 ನೇ ಪ್ರತಿವಾದಿ ದಾವಾ ಆಸ್ತಿ ಬಿ(ಬಿ) ಯಲ್ಲಿ ವಾಸವಾಗಿರುತ್ತಾರೆ. ದಾದಾಪೀರ ನ ಜೀವಿತ ಕಾಲದಲ್ಲಿ 1 ನೇ ವಾದಿ ಮತ್ತು 1ನೇ ಪ್ರತಿವಾದಿ ಪ್ರತ್ಯೇಕ ಮನೆಯಲ್ಲಿ ವಾಸವಾಗಿದ್ದರು ಎಂದರೆ ಸರಿ. ನಾನು ಮತ್ತು ದಾದಾಪೀರ ಸ್ನೇಹಿತರು  ಮತ್ತು ನಾನು ಆತನ ಬಳಿ ಕೆಲಸ ಮಾಡುತ್ತಿದ್ದೇನು ಎಂದು ಸುಳ್ಳು ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ.  ನಾನು ವಾದಿಯರಿಗೆ ಸಹಾಯ ಮಾಡಲು ಸುಳ್ಳು ಸಾಕ್ಷಿ ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ. ದಾವಾ ಆಸ್ತಿ ಅನುಸೂಚಿ ಬಿ ಆಸ್ತಿಗಳು 1ನೇ ಪ್ರತಿವಾದಿ ಸ್ವಂತ ಆಸ್ತಿಗಳು ಎಂದರೆ ಸರಿಯಲ್ಲ. ವಾದಿಯರ ಮನೆತನದ ಬಗ್ಗೆ ಮಾಹಿತಿ ಇರದಿದ್ದರು ಕೂಡಾ ಸುಳ್ಳು ಪ್ರಮಾಣ ಪತ್ರ ಸಲ್ಲಿಸಿ

ಸುಳ್ಳು ಸಾಕ್ಷಿ ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ. 30 ವರ್ಷಗಳ ಹಿಂದೆ ಪ್ರತಿ ದಿನಕ್ಕೆ 50-60 ರೂ ವೇತನ ಇತ್ತು ಎಂದರೆ ಸರಿಯಲ್ಲ.

**ಮರು ವಿಚಾರಣೆ ಇರುವುದಿಲ್ಲ**

(ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತಲೇಖನದಂತೆ ಬೆರಳಚ್ಚು ಮಾಡಲಾಯಿತು)

ಓ ಹೇ ಕೇ ಸರಿ ಅದೆ ,

3 ನೇ ಹೆ ಹಿ ದಿ ನ್ಯಾ ಹಾಗೂ ಸಿಜೆಎಂ, ಧಾರವಾಡ.